said that "We are going to start it immediately.' When that 'immediately' will come? Will you specifically tell us that before the end of this month the police station will start? What are the hurdles? What are the difficulties? In the other 3 regions it has already been started. Why there is delay to start a women police station in Gulbarga?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ವಾಸ್ತವಾಂಶದಲ್ಲಿ ರಾಜ್ಯದಲ್ಲಿ ಹಿಂದೆ ಏಳು ಮಹಿಳಾ ಪೊಲೀಸ್ ಠಾಣೆಗಳಿಗೆ ಸರ್ಕಾರ ಮಂಜೂರಾತಿಯನ್ನು ಕೊಟ್ಟಿದೆ. ಬೆಂಗಳೂರು ನಗರ ಒಂದು ಬಿಟ್ಟು, ಬಾಕಿ ಎಲ್ಲಾ ಕಡೆಗಳಲ್ಲೂ ಅದು ಕಾರ್ಯ ಆರಂಭಿಸಿಲ್ಲ. ಬೆಂಗಳೂರು ನಗರದಲ್ಲಿ ಮಾತ್ರ ಫುಲ್ ಫ್ಲೆಜ್ಡ್ ವುಮೆನ್ ಪೊಲೀಸ್ ಸ್ಟೇಷನ್ ಇರತಕ್ಕಂಥದ್ದು. ಈಗ ಈ ಆರು ಕಡೆಗಳಲ್ಲಿ ಮೈಸೂರು ನಗರ, ಹುಬ್ಬಳ್ಳಿ-ಧಾರವಾಡ್ ನಗರ, ಮಂಗಳೂರು ಬೆಳಗಾವಿ, ಶಿವಮೊಗ್ಗ ಗುಲ್ಬರ್ಗಾ ನಗರಗಳಲ್ಲಿ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಅದಕ್ಕೆ ಬೇಕಾಗಿರತಕ್ಕಂಥ ಸಬ್ ಇನ್‌ಸಪೆಕ್ಟರ್ಸ್ ಮತ್ತು ಮಹಿಳಾ ಪೊಲೀಸ್ ಕಾನ್‌ಸ್ಟೇಬಲ್‌ಗಳು ಇದು ಯಾವುದೂ ಸಹಿತ ಇಲ್ಲ. ಇದನ್ನು ನಾನು ರಿಕ್ರೂಟ್ ಮಾಡಬೇಕಾಗುತ್ತದೆ ಮತ್ತು ಆದಾದ ಮೇಲೆ ಒಂದು ವರ್ಷ ಅವರಿಗೆ ಟ್ರೈನಿಂಗ್ ಕೊಡಬೇಕಾಗುತ್ತದೆ. ಆದ್ದರಿಂದ 15 ದಿವಸದಲ್ಲಿ ಒಂದು ತಿಂಗಳಿನಲ್ಲಿ, ಎರಡು ತಿಂಗಳಿನಲ್ಲಿ ಇದನ್ನು ಪ್ರಾರಂಭ ಮಾಡತಕ್ಕಂಥ ಸಾಧ್ಯತೆಗಳು ಬಹಳ ಕಡಿಮೆ ಇದೆ. ಇರತಕ್ಕಂಥ ಒಂದು ಪೊಲೀಸ್‌ಸ್ಟೇಷನ್‌ನಲ್ಲಿ ವುಮೆನ್ಸ್ ವಿಂಗ್ ಎಂದು ಹೇಳಿ ಕಾರ್ಯ ಆರಂಭಿಸುವುದಕ್ಕೆ ಏನಾದರೂ ಅವಕಾಶ ಮಾಡಿಕೊಡಬಹುದೇ ವಿನಹ ವಸ್ತುಸ್ಥಿತಿಯಲ್ಲಿ, ಆದಷ್ಟು ಶೀಘ್ರವಾಗಿ ಮಾಡಬೇಕೆಂದರು ಸುಮಾರು ಒಂದು ವರ್ಷ ಆಗುತ್ತದೆ. ಇದು ಒಂದು ನಿಜವಾದ ಪರಿಸ್ಥಿತಿ. This is the real situation.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಸಿ. ಬೈರೇಗೌಡ : ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ 8ನೇ ಆಗಸ್ಟ್ 1995ರ ಲಿಖಿತ ಮೂಲಕ ಉತ್ತರಿಸುವ ಎರಡನೇ ಪಟ್ಟಿಯಲ್ಲಿರುವ 58 ಪ್ರಶ್ನೆಗಳ ಪೈಕಿ 48 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸಲು ಇಚ್ಛಿಸುತ್ತೇನೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಜಾಗಗಳನ್ನು ಕ್ಲಬ್‌ಗಳಿಗೆ ಗುತ್ತಿಗೆ ನೀಡಿರುವುದು.

130 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಜಾಗಗಳನ್ನು ಗುತ್ತಿಗೆ ಆಧಾರದ ಮೇಲೆ ಖಾಸಗೀ ಕ್ಲಬ್‌ಗಳಿಗೆ ನೀಡಲಾಗಿದೆಯೇ?*

ಆ) *ಹಾಗಿದ್ದಲ್ಲಿ ಯಾವ ಯಾವ ಪ್ರದೇಶಗಳಲ್ಲಿ ಎಷ್ಟೆಷ್ಟು ಜಾಗವನ್ನು ಯಾವ ಯಾವ ಕ್ಲಬ್‌ಗಳಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆ.*

ಇ) *ಸಾರ್ವಜನಿಕರ ಹಿತದೃಷ್ಟಿಯಿಂದ ಈ ಗುತ್ತಿಗೆಗಳನ್ನು ರದ್ದುಗೊಳಿಸಿ ಈ ಜಾಗಗಳನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಬಳಸಲು ಸರ್ಕಾರದವರು ಪರಿಶೀಲಿಸುವರೇ?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು)

ಅ) ಹೌದು

ಆ) ಪಟ್ಟಿಯನ್ನು ಲಗತ್ತಿಸಿದೆ.

ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆಯಲ್ಲಿ ಮನೋರಂಜನಾ ಕೇಂದ್ರ, ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆ ಕೇಂದ್ರಗಳನ್ನು ಸ್ಥಾಪಿಸಲು ಸಿ.ಎ. ನಿವೇಶನಗಳನ್ನು ಗುತ್ತಿಗೆಗೆ ನೀಡಲು ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ. ಅದರಂತೆಯೇ ಅಂತಹ ಕೇಂದ್ರಗಳನ್ನು ಆರಂಭಿಸಲು ಪ್ರಾಧಿಕಾರವು ಸಿ.ಎ. ನಿವೇಶನಗಳನ್ನು ಹಂಚಿಕೆ ಮಾಡಿದೆ, ಹಂಚಿಕೆ ಸಂಸ್ಥೆಗಳು ಗುತ್ತಿಗೆ, ಕರಾರು ಪತ್ರ, ಸ್ವಾಧೀನ ಪತ್ರ, ಖಾತಾ ಹಾಗೂ ಅನುಮೋದಿತ ನಕ್ಷೆ ಇತ್ಯಾದಿಗಳನ್ನು ಮಂಜೂರು ಮಾಡಿಸಿ ಕೊಂಡು ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಿ.ಎ. ನಿವೇಶನ ಹಂಚಿಕೆ ನಿಯಮಾವಳಿಗಳು - 1989ರ ಪ್ರಕಾರ ಗುತ್ತಿಗೆ ಕರಾರು ಪತ್ರದ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಿ.ಎ. ನಿವೇಶನಗಳ ಹಂಚಿಕೆ ನಿಯಮಾವಳಿ 1989ರ ಅನ್ವಯ ಗುತ್ತಿಗೆ ನೀಡಿರುವ ಸ್ವತ್ತುಗಳನ್ನು ಹಿಂದಕ್ಕೆ ಪಡೆಯಬಹುದಾಗಿದೆ.

ಬೆಂಗಳೂರು ನಗರದಲ್ಲಿ ಭಾವಚಿತ್ರದ ಮತದಾರರ ಗುರುತಿನ ಚೀಟಿ ನೀಡುವ ಬಗ್ಗೆ

155 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿ ಒಟ್ಟು ಎಷ್ಟು ಮತದಾರರ ಭಾವಚಿತ್ರಗಳನ್ನು ತೆಗೆಯಲಾಗಿದೆ. (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು

ಆ) ಇವುಗಳ ಪೈಕಿ ಭಾವಚಿತ್ರದಿಂದ ಕೂಡಿದ ಗುರುತಿನ ಚೀಟಿಯನ್ನು ಎಷ್ಟು ಜನರಿಗೆ ನೀಡಲಾಗಿದೆ. (ವಿಧಾನ ಸಭಾ ಕ್ಷೇತ್ರವಾರು ನೀಡುವುದು)

ಇ) ಭಾವ ಚಿತ್ರ ತೆಗೆಸಲು ಹಾಗೂ ಗುರುತಿನ ಚೀಟಿ ನೀಡಲು ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು?

ಈ) ಕೇಂದ್ರ ಸರ್ಕಾರದಿಂದ ಈ ಬಾಬ್ತಿಗೆ ಬಂದ ಹಣವೆಷ್ಟು?

ಉ) ಭಾವಚಿತ್ರವನ್ನು ತೆಗೆದ ಎಲ್ಲಾ ಮತದಾರರಿಗೆ ಯಾವಾಗ ಗುರುತಿನ ಚೀಟಿಗಳನ್ನು ನೀಡಲಾಗುವುದು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) 11,50,93i ವಿಧಾನ ಸಭಾ ಕ್ಷೇತ್ರಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇದುವರೆವಿಗೆ ನೀಡಿರುವುದಿಲ್ಲ.

ಇ) ರೂ. 58,41,583-00 (ಬೆಂಗಳೂರು ನಗರಕ್ಕೆ ಮಾತ್ರ)

ಈ) ಕರ್ನಾಟಕ ರಾಜ್ಯಕ್ಕೆ 11,93,62,000-00 ರೂ.ಗಳು ಮಾತ್ರ ಬಿಡುಗಡೆ ಮಾಡಲಾಗಿದೆ.

ಉ) ನವೆಂಬರ್ 1995ರ ಅಂತ್ಯದೊಳಗೆ ನೀಡಲು ಉದ್ದೇಶಿಸಲಾಗಿದೆ.